## ಕೃಷಿ ವಿಜ್ಞಾನ ಕೇಂದ್ರದ, ಮೂಡಿಗೆರೆ

ಭಾರತೀಯ ಕೃಷಿ ಅನುಸಂಧಾನ ಪರಿಷತ್ (ನವದೆಹಲಿ) ರೈತರಿಗೆ ಕೃಷಿ ಸಂಬಂಧಿತ ಅಗತ್ಯ ತಾಂತ್ರಿಕತೆಗಳನ್ನು ಪೂರೈಸುವ ಉದ್ದೇಶದಿಂದ ಪ್ರತಿ ಜಿಲ್ಲೆಗೊಂದರಂತೆ ಕೃಷಿ ವಿಜ್ಞಾನ ಕೇಂದ್ರವನ್ನು ಹಾಗೂ ದೊಡ್ಡ ಜಿಲ್ಲೆಯಲ್ಲಿ ಎರಡು ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸುತ್ತಾ ಬಂದಿದೆ. ಇದರ ಫಲಶೃತಿಯಂತೆ ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ಪಾಂಡಿಚೆರಿಯಲ್ಲಿ 1974 ರಲ್ಲಿ ಮೊದಲನೇ ಕೃಷಿ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಯಿತು. ತದನಂತರ ಬೇರೆ ಜಿಲ್ಲೆಗಳಲ್ಲಿ ಪ್ರಾರಂಬಿಸುತ್ತಾ ಬಂದು. ಈಗ ಕೇಂದ್ರಗಳಿಂದ ಕೃಷಿಕರಿಗೆ ಆಗುವ ಉಪಯೋಗಗಳನ್ನು ಮನಗಂಡು ಈ ಕೃಷಿ ವಿಜ್ಞಾನ ಕೇಂದ್ರಗಳನ್ನು ರಾಷ್ಟ್ರವ್ಯಾಪಿ ವಿಸ್ತರಿಸಲಾಯಿತು. ಪ್ರಸ್ತುತ ರಾಷ್ಟ್ರದಲ್ಲಿ ಒಟ್ಟು 638 ಕೃಷಿ ವಿಜ್ಞಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೃಷಿ ವಿಜ್ಞಾನ ಕೇಂದ್ರಗಳನ್ನು ಆಯಾ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು ಅಥವಾ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಸಂಸ್ಥೆಗಳು ಅಥವಾ ಸರ್ಕಾರೇತರ ಸಂಸ್ಥೆಗಳು ನಿರ್ವಹಿಸುತ್ತಿವೆ.

ಪ್ರತಿ ಕೇಂದ್ರದಲ್ಲಿ 16 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಅವರಲ್ಲಿ ಒಬ್ಬರು ಕಾರ್ಯಕ್ರಮ ಸಂಯೋಜಕರು, 6 ಜನ ವಿಷಯ ತಜ್ಞರು, 3 ಜನ ತಾಂತ್ರಿಕ ಸಿಬ್ಬಂದಿ ಹಾಗು 7 ಜನ ಇತರೆ ಸಿಬ್ಬಂದಿಗಳು. ಕೃಷಿ ವಿಜ್ಞಾನ ಕೇಂದ್ರವು ದೇಶದ ಕೃಷಿ ಉತ್ಪನ್ನವನ್ನು ಹೆಚ್ಚಿಸಿ ರೈತರ ಆರ್ಥಿಕ ಮತ್ತು ಸಾಮಾಜಿಕ ಮಟ್ಟವನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಜಿಲ್ಲೆಯ ಸರ್ವಾಂಗೀಣ ಆರ್ಥಿಕ ಅಭಿವೃದ್ಧಿಗಾಗಿ ಸಾರ್ವಜನಿಕ, ಖಾಸಗಿ, ಸ್ವಯಂ ಸೇವಾ ಘಟಕಗಳಿಗೆ ತಂತ್ರಜ್ಞಾನವನ್ನು ಒದಗಿಸುವ ಹಾಗೂ ಪರಿಷ್ಕರಿಸುವ ಜ್ಞಾನ ಭಂಡಾರ ಹಾಗೂ ಸಂಪನ್ಮೂಲ ಕೇಂದ್ರವಾಗಿ ಕಾರ್ಯನಿರ್ವಹಿಸುವುದು.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇದರ ಅಡಿಯಲ್ಲಿ 1985ನೇ ಇಸವಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೃಷಿಕರ ಆಶಾಕಿರಣವಾಗಿ ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆಯಲ್ಲಿ ಸ್ಥಾಪಿತವಾಗಿದೆ. ಪ್ರಸ್ತುತ ಈ ಕೇಂದ್ರವು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಇದರ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

### ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆ, ಚಿಕ್ಕಮಗಳೂರು ಇದರ ಕಾರ್ಯ ವ್ಯಾಪ್ತಿ

ಚಿಕ್ಕಮಗಳೂರು ಜಿಲ್ಲೆಯು 3 ಕೃಷಿ ವಲಯಗಳನ್ನು ಹೊಂದಿದ್ದು, ಗುಡ್ಡಗಾಡು ವಲಯ–9, ಅರೆಮಲೆನಾಡು ವಲಯ–7, ಒಣ ವಲಯ–4. ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಿವೆ ಅವುಗಳೆಂದರೆ, ಚಿಕ್ಕಮಗಳೂರು, ಮೂಡಿಗೆರೆ, ನರಸಿಂಹರಾಜಪುರ, ಕಡೂರು, ಕೊಪ್ಪ, ಶೃಂಗೇರಿ ಮತ್ತು ತರೀಕೆರೆ. ಜಿಲ್ಲೆಯಲ್ಲಿ ಸಾಮಾನ್ಯವಾಗಿ ವರ್ಷಕ್ಕೆ ಸರಾಸರಿ 1903 ಮೀ.ಮೀ. ಮಳೆಯಾಗುತ್ತದೆ. ಕೆಂಪು ಮರಳು ಮಿಶ್ರಿತ ಮಣ್ಣು, ಜಂಬಿಟ್ಟಿಗೆ ಮಣ್ಣು, ಮೆಕ್ಕಲು ಮಣ್ಣು, ಕಪ್ಪು ಮಣ್ಣು ಜಿಲ್ಲೆಯಲ್ಲಿ ಹರಡಿವೆ.

ಜಿಲ್ಲೆಯಲ್ಲಿ ಒಟ್ಟು 41,100 ಹೆಕ್ಟೇರ್ ನೀರಾವರಿ ಭೂಮಿ ಇದ್ದು, 2,61,100 ಹೆಕ್ಟೇರ್ ಮಳೆಯಾಧರಿತ ಭೂಮಿ, 2800 ಹೆಕ್ಟೇರ್ ನಾಲಾ ನೀರಾವರಿ ಭೂಮಿ ಮತ್ತು 10,700 ಹೆಕ್ಟೇರ್ ಭೂಮಿಯು ಹೊಂಡಗಳ ಮೂಲಕ ನೀರಾವರಿಯನ್ನು ಆಧರಿಸಿವೆ. ಜಿಲ್ಲೆಯಲ್ಲಿ ಮುಂಗಾರು ಬೆಳೆಗಳಾಗಿ ಭತ್ತ, ಜೋಳ, ರಾಗಿ, ಮೆಕ್ಕೆಜೋಳ, ಹತ್ತಿ, ಕಬ್ಬು, ಸೂರ್ಯಕಾಂತಿ, ಶೇಂಗಾ, ಸಾಸುವೆ, ಹೆಸರುಕಾಳು, ಉದ್ದಿನಕಾಳು, ಅಲಸಂದೆ, ತೊಗರಿಬೆಳೆ, ಅವರೆ, ಮೆಣಸಿನಕಾಯಿ, ಟೊಮ್ಯಾಟೋ, ತಿಂಗಳ ಹುರುಳಿ, ಸುಗಂಧರಾಜ ಮತ್ತು ಚೆಂಡು ಹೂವನ್ನು ಬೆಳೆಯಲಾಗುತ್ತದೆ. ಹಿಂಗಾರು ಬೆಳೆಗಳಾಗಿ ಮೆಕ್ಕೆಜೋಳ, ಸೂರ್ಯಕಾಂತಿ, ಹೆಸರುಕಾಳು, ಕಡಲೆಕಾಳು ಬೆಳೆಯಲಾಗುತ್ತದೆ. ಸರ್ವಕಾಲಿಕ ಬೆಳೆಗಳಾದ ಅಡಿಕೆ, ತೆಂಗು, ಕೋಕೋ, ನಿಂಬೆ, ಶುಂಠಿ, ಕರಿಮೆಣಸು, ಗೇರು, ಏಲಕ್ಕಿ, ತಾಳೆ, ಮಾವು, ಅನಾನಸ್, ಬಾಳೆ, ಸಪೋಟ, ಕಿತ್ತಳೆ ಮತ್ತು ಅರಿಶಿನವನ್ನು ಜಿಲ್ಲೆಯಲ್ಲಿ ಬೆಳೆಯಲಾಗುತ್ತಿದೆ.

### ಕಾಫಿಯ ತೊಟ್ಟಿಲು/ಕಾಫಿಯ ಕಣಜ

ಕ್ರಿ.ಶ. 1670ರಲ್ಲಿ ದೇಶದಲ್ಲಿಯೇ ಮೊಟ್ಟ ಮೊದಲು ಕಾಫಿಯನ್ನು ದತ್ತಗಿರಿ/ಬಾಬಾ ಬುಡನ್ ಗಿರಿಯಲ್ಲಿ ಬೆಳೆಯಲಾಯಿತು. 150 ವರ್ಷಗಳ ಹಿಂದೆಯೇ ಅತಿ ದೊಡ್ಡ ಪ್ರಮಾಣದಲ್ಲಿ ಜಿಲ್ಲೆಯು ಯುರೋಪಿಯನ್ನರ ಕಾಫಿ ಬೆಳೆಯ

ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದಾರೆ ಮತ್ತು ಸಿಲ್ವಿಯನ್ ಇಳಿಜಾರುಗಳು ಕಾಫಿಯಿಂದ ಆವೃತಗೊಂಡಿವೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ಕಾಫಿ ತೋಟಗಳ ನಡುವೆ ನಡೆವಾಗ ಕಾಫಿಯ ಹೂಗಳು ಅರಳಿ ಸುಮಧುರ ವಾಸನೆಯನ್ನು ಹರಡುತ್ತವೆ.

ಚಿಕ್ಕಮಗಳೂರು ಜಿಲ್ಲೆಯ ಅಭಿವೃದ್ಧಿಯಲ್ಲಿ ಕೇಂದ್ರವು ತನ್ನದೇ ಆದ ವೈಶಿಷ್ಟ್ಯ ಮತ್ತು ಸ್ಥಾನವನ್ನು ಹೊಂದಿದೆ. ಕೃಷಿಕರು ಕ್ಷೇತ್ರ ಮಟ್ಟದಲ್ಲಿ ಸುಧಾರಿತ ಕೃಷಿ ತಂತ್ರಜ್ಞಾನ ಅಳವಡಿಸುವಾಗ ಎದುರಿಸುವ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಪರಿಹಾರೋಪಾಯಗಳನ್ನು ಸೂಚಿಸುವ ಹಾಗೂ ಈ ಪರಿಹಾರಗಳನ್ನು ಅಳವಡಿಸುವಂತೆ ಮನವರಿಕೆ ಮಾಡುವ ಜವಾಬ್ದಾರಿ ಕೇಂದ್ರದ ಮೇಲಿದೆ.

ಕೃಷಿ ವಿಜ್ಞಾನ ಕೇಂದ್ರದಲ್ಲಿ ಕಾರ್ಯಾನುಭವವೇ ತರಬೇತಿಯ ಮುಖ್ಯ ಉದ್ದೇಶ. ತರಬೇತಿ ಪಡೆಯುವವರು ಕೌಶಲ್ಯವನ್ನು ಮಾಡುತ್ತಾ ಕಲಿಯುವರು. ಇಲ್ಲಿಯ ತರಬೇತಿಯು, ಕೊಠಡಿ ಉಪನ್ಯಾಸಕ್ಕಿಂತ ಕೊಠಡಿಯಿಂದ ಜಮೀನಿನಲ್ಲಿ ಕೆಲಸ ಮಾಡುವ ಪದ್ಧತಿಯನ್ನು ಹಾಗೂ **ಜಮೀನು ಮತ್ತು ಕಾರ್ಯಾಗಾರದಿಂದ ಚರ್ಚೆಯೆಡೆಗೆ** ಸಾಗಲು ಅನುವು ಮಾಡಿಕೊಡುತ್ತದೆ. ಕೇಂದ್ರದಲ್ಲಿ ಕೃಷಿ ವಿಸ್ತರಣೆ, ಬೇಸಾಯಶಾಸ್ತ್ರ, ಮಣ್ಣು ವಿಜ್ಞಾನ, ತೋಟಗಾರಿಕೆ, ಸಸ್ಯ ಸಂರಕ್ಷಣೆ, ಗೃಹ ವಿಜ್ಞಾನ ಹಾಗೂ ಪಶು ವೈದ್ಯಕೀಯ ಶಾಸ್ತ್ರದ ವಿಜ್ಞಾನಿಗಳೇ ತರಬೇತುದಾರರಾಗಿರುವುದರಿಂದ ಕೃಷಿಯಲ್ಲಿ ಅವಿಷ್ಕಾರಗೊಂಡಿರುವ ಸುಧಾರಿತ ತಾಂತ್ರಿಕತೆಯ ಫಲ ರೈತರಿಗೆ ನೇರವಾಗಿ ತಲುಪುವುದು. ರೈತರು ವಿಜ್ಞಾನಿಗಳಿಂದ ತಮ್ಮ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ತಕ್ಷಣ ಪಡೆಯುವರು. ಇಲ್ಲಿ ನಡೆಸುವ ತರಬೇತಿಯು **ರೈತರಲ್ಲಿ ಕಾರ್ಯ ಕೌಶಲ್ಯಗಳನ್ನು** ಕಲಿಸುವ ಹಾಗೂ **ಸಮಸ್ಯೆಗಳನ್ನು ಎದುರಿಸುವ** ಆತ್ಮವಿಶ್ವಾಸವನ್ನು ಹೊಂದುವಂತಹ ಪ್ರವೃತ್ತಿಯನ್ನು ಬೆಳೆಸುವುದಾಗಿದೆ.

**ಕೃಷಿ ವಿಜ್ಞಾನ ಕೇಂದ್ರದ ಧ್ಯೇಯೋದ್ದೇಶಗಳು:**

1. ಸ್ಥಳ ನಿರ್ಧಿಷ್ಟ, ಸುಸ್ಥಿರ ಭೂಬಳಕೆ ವ್ಯವಸ್ಥೆಗೆ ಸೂಕ್ತ ತಂತ್ರಜ್ಞಾನವನ್ನು ಮರುಪರಿಶೀಲನೆಗೆ ರೈತರ ತಾಕುಗಳಲ್ಲಿ ತಂತ್ರಜ್ಞಾನ ಪರೀಕ್ಷೆಗಳನ್ನು ಏರ್ಪಡಿಸುವುದು.
2. ಉತ್ಪನ್ನ ಮಾಹಿತಿ ಪಡೆಯಲು ಹಾಗೂ ರೈತರ ಅಭಿಪ್ರಾಯ ತಿಳಿಯಲು ವಿವಿಧ ಬೆಳೆಗಳ ಮತ್ತು ಉದ್ಯಮಗಳ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ರೈತರ ತಾಕುಗಳಲ್ಲಿ ಏರ್ಪಡಿಸುವುದು.
3. ರೈತರಿಗೆ ನೂತನ ತಂತ್ರಜ್ಞಾನ ಮರು ಪರಿಶೀಲನೆ ಹಾಗೂ ಪ್ರಾತ್ಯಕ್ಷಿಕೆಗಳ ತಂತ್ರಜ್ಞಾನದ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮತ್ತು ವಿವಿಧ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರುಗಳಿಗೆ ಆಧುನಿಕ ತಂತ್ರಜ್ಞಾನದ ಬೆಳವಣಿಗೆಯ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು
4. ನೂತನ ಕೃಷಿ ತಂತ್ರಜ್ಞಾನಗಳ ಜಾಗೃತಿಗಾಗಿ ಹಲವಾರು ಸೂಕ್ತ ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
5. ರೈತರ ಅಗತ್ಯಕ್ಕನುಗುಣವಾಗಿ ಗುಣಮಟ್ಟದ ಬೀಜ, ಕಸಿಗಿಡಗಳು, ಜಾನುವಾರು ತಳಿಗಳು ಪ್ರಾಣಿಜನ್ಯ ಉತ್ಪನ್ನಗಳು ಮತ್ತು ಜೈವಿಕ ಉತ್ಪನ್ನಗಳನ್ನು ಒದಗಿಸುವುದು.
6. ಜಿಲ್ಲೆಯ ಕೃಷಿ ಆರ್ಥಿಕತೆಯ ಅಭಿವೃದ್ಧಿಗಾಗಿ ಶ್ರಮಿಸುವ ಸರ್ಕಾರಿ, ಖಾಸಗೀ ಹಾಗೂ ಸ್ವಯಂ ಪ್ರೇರಿತ ಸಂಸ್ಥೆಗಳಿಗೆ ಅಗತ್ಯವಿರುವ ಕೃಷಿ ತಂತ್ರಜ್ಞಾನಗಳ ಮಾಹಿತಿ ಹಾಗೂ ಸಂಪನ್ಮೂಲ ಕೇಂದ್ರವಾಗಿ ಕಾರ್ಯನಿರ್ವಹಿಸುವುದು.

**ಕೃಷಿ ವಿಜ್ಞಾನ ಕೇಂದ್ರದ ವೈಜ್ಞಾನಿಕ ಸಲಹಾ ಸಮಿತಿ**

ಕೃಷಿ ವಿಜ್ಞಾನ ಕೇಂದ್ರದಲ್ಲಿ ವೈಜ್ಞಾನಿಕ ಸಲಹಾ ಸಮಿತಿಯು ಸ್ಥಳೀಯ ಮಾರ್ಗದರ್ಶಕ ಸಮಿತಿಯಾಗಿದ್ದು ಕೃಷಿಕರ ಸ್ಥಳೀಯ ಸಮಸ್ಯೆಗಳ ಆಧಾರದ ಮೇಲೆ ಕೃಷಿ ವಿಜ್ಞಾನ ಕೇಂದ್ರಕ್ಕೆ ಮಾರ್ಗದರ್ಶನ ನೀಡುವುದು. ಈ ಸಮಿತಿಯಲ್ಲಿ ಕೃಷಿ ಮತ್ತು ತೋಟಗಾರಿಕ ವಿಶ್ವವಿದ್ಯಾಲಯ, ಶಿವಮೊಗ್ಗದ ಕುಲಪತಿಗಳು ಅಧ್ಯಕ್ಷರಾಗಿದ್ದು, ವಿಸ್ತರಣಾ ನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ವಲಯ–8ರ ಯೋಜನಾ ನಿರ್ದೇಶಕರು ಮತ್ತು ಜಿಲ್ಲೆಯ ವಿವಿಧ ಇಲಾಖೆಗಳ ಮುಖ್ಯಸ್ಥರು, ಕೃಷಿ ಆಧಾರಿತ ಸ್ಥಳೀಯ ಕೇಂದ್ರ ಮತ್ತು ರಾಜ್ಯದ ಅಧೀನಕ್ಕೆ ಒಳಪಟ್ಟ ಸಂಶೋಧನಾ ಸಂಸ್ಥೆಗಳ ಮುಖ್ಯಸ್ಥರುಗಳು ಹಾಗೂ ದೊಡ್ಡ ಮತ್ತು ಸಣ್ಣ ಭೂ ಹಿಡುವಳಿ ಹೊಂದಿರುವ ರೈತ ಮತ್ತು ರೈತ ಮಹಿಳಾ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಕೃಷಿ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕರು ಈ ಸಮಿತಿಯ ನಿಯೋಜಕರಾಗಿರುತ್ತಾರೆ. ಈ ಸಮಿತಿಯು ವರ್ಷಕ್ಕೆ ಎರಡು ಬಾರಿ ಸಭೆ ಸೇರಿ ಜಿಲ್ಲೆಯ ಕೃಷಿ ಮತ್ತು ಕೃಷಿ ಅವಲಂಬಿತ ಸಮಸ್ಯೆಗಳನ್ನು ಕೂಲಂಕುಷವಾಗಿ ಚರ್ಚಿಸಿ ಕೃಷಿ ವಿಜ್ಞಾನ ಕೇಂದ್ರಕ್ಕೆ ಮಾರ್ಗದರ್ಶನ ನೀಡುವುದು.

**ಕೃಷಿ ವಿಜ್ಞಾನ ಕೇಂದ್ರದ ಕಾರ್ಯಚಟುವಟಿಕೆಗಳು**

**ತಂತ್ರಜ್ಞಾನ ಪರಿಶೀಲನೆ (On Farm Testings)**

ರೈತರು ಅನುಸರಿಸುತ್ತಿರುವ ಕೃಷಿ ಪದ್ಧತಿಗಳು ಮತ್ತು ವಿಜ್ಞಾನಿಗಳು ಅಭಿವೃದ್ಧಿಪಡಿಸಿ ಮತ್ತು ಶಿಫಾರಸ್ಸು ಮಾಡಿರುವ ಹೊಸ ತಂತ್ರಜ್ಞಾನಗಳನ್ನು ಗುಣಾತ್ಮಕವಾಗಿ ರೈತರ ತಾಕುಗಳಲ್ಲಿ ಪರಿಶೀಲಿಸಿ ಸ್ಥಳೀಯ ಪರಿಸ್ಥಿತಿಗೆ ಹೊಂದಿಕೊಳ್ಳುವಂತಹ ತಂತ್ರಜ್ಞಾನವನ್ನು ರೈತರಿಗೆ ಒದಗಿಸುವುದು.

**ಮುಂಚೂಣಿ ಪ್ರಾತ್ಯಕ್ಷಿಕೆ (Front Line Demonstration)**

ಹೊಸದಾಗಿ ಅಭಿವೃದ್ಧಿಪಡಿಸಿದ ಕೃಷಿ ತಾಂತ್ರಿಕತೆಗಳ ಬಗ್ಗೆ ರೈತರಲ್ಲಿ ನಂಬಿಕೆ ಮೂಡಿಸಿ ಅದನ್ನು ಅಳವಡಿಸುವಂತೆ ಪ್ರೇರೇಪಿಸಲು ಹಾಗೂ ರಾಷ್ಟ್ರದ ಉತ್ಪಾದಕತೆ ಹೆಚ್ಚಿಸಲು ಮತ್ತು ತಾಂತ್ರಿಕತೆಗಳನ್ನು ಎಲ್ಲಾ ಕಡೆಗೂ ವಿಸ್ತರಿಸುವಂತೆ ಮಾಡಲು ರೈತರ ಜಮೀನಿನಲ್ಲಿ ಕೃಷಿ ವಿಜ್ಞಾನಿಗಳು ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳುವುದು. ಇದರಿಂದ ತಾಂತ್ರಿಕತೆಯನ್ನು ಅಳವಡಿಸಿದ ಬೆಳೆಯ ವಿವಿಧ ಹಂತಗಳನ್ನು ರೈತರ ಪದ್ಧತಿಗೆ ಹೋಲಿಕೆ ಮಾಡಿ ಬೆಳವಣಿಗೆಯಲ್ಲಿ ಕಂಡುಬರುವ ವ್ಯತ್ಯಾಸ ಹಾಗೂ ತಾಂತ್ರಿಕತೆಯ ಉತ್ತಮತೆಯನ್ನು ರೈತರಿಗೆ ಮನವರಿಕೆ ಮಾಡಿದಂತಾಗುತ್ತದೆ. ಇದರಿಂದ ರೈತರು ಹೊಸ ತಾಂತ್ರಿಕತೆಗಳನ್ನು ತಮ್ಮ ಜಮೀನುಗಳಲ್ಲಿ ಅಳವಡಿಸಿಕೊಂಡು ಹಾಗೂ ಮುಂದುವರಿಸಿಕೊಂಡು ಹೋಗಲು ಪ್ರೇರಣೆಯಾಗುತ್ತದೆ.

**ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗುವ ತರಬೇತಿ ಕಾರ್ಯಕ್ರಮಗಳು**

ರೈತರು, ರೈತ ಮಹಿಳೆಯರು ಮತ್ತು ಗ್ರಾಮೀಣ ಯುವಕ ಯುವತಿಯರಿಗೆ ಹೊಸ ಕೃಷಿ ತಂತ್ರಜ್ಞಾನಗಳನ್ನು ಅಳವಡಿಸಲು ಬೇಕಾಗುವ ಜ್ಞಾನ ಮತ್ತು ಕೌಶಲ್ಯತೆಗಳ ಬಗ್ಗೆ ಒಳಾಂಗಣ ಮತ್ತು ಹೊರಾಂಗಣ ತರಬೇತಿಗಳನ್ನು ಬೇಡಿಕೆಗೆ ಅನುಸಾರವಾಗಿ ನೀಡಲಾಗುತ್ತದೆ ಹಾಗೂ ವೈಜ್ಞಾನಿಕ ಮನೋಭಾವವನ್ನು ಬೆಳೆಸಲಾಗುವುದು. ಗ್ರಾಮೀಣ ಯುವಕ ಯುವತಿಯರಿಗೆ ಸ್ಥಳೀಯವಾಗಿ ಸ್ವ–ಉದ್ಯೋಗ ಅವಕಾಶಗಳನ್ನು ಹೆಚ್ಚಿಸಲು ಕೃಷಿ ಆಧಾರಿತ ವೃತ್ತಿಪರ ತರಬೇತಿಗಳನ್ನು ಹಮ್ಮಿಕೊಳ್ಳಲಾಗುವುದು. ಈ ತರಬೇತಿಗಳಲ್ಲಿ ರೈತರು/ರೈತ ಮಹಿಳೆಯರ ಜ್ಞಾನ, ಕೌಶಲ್ಯತೆ ಹಾಗೂ ಮನೋಭಾವವನ್ನು ಹೊಸ ತಾಂತ್ರಿಕತೆಗಳ ಕಡೆಗೆ ಬದಲಾಯಿಸಲು ಶ್ರಮಿಸುವುದು.

**ಕೃಷಿ ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿ**

ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿವೃದ್ಧಿ ಇಲಾಖೆಗಳ ವಿಸ್ತರಣಾ ಕಾರ್ಯಕರ್ತರಿಗೆ ನವೀನ ಕೃಷಿ ತಂತ್ರಜ್ಞಾನಗಳ ಬಗ್ಗೆ ಜ್ಞಾನ ಹಾಗೂ ಕೌಶಲ್ಯವನ್ನು ಹೆಚ್ಚಿಸಲು ತರಬೇತಿಗಳನ್ನು ಹಮ್ಮಿಕೊಳ್ಳುವುದು.

**ವೃತ್ತಿಪರ ತರಬೇತಿಗಳು**

ಗ್ರಾಮೀಣ ಪ್ರದೇಶದಲ್ಲಿರುವ ನಿರುದ್ಯೋಗಿ ಯುವಕ ಯುವತಿಯರಿಗೆ ಸ್ವ–ಉದ್ಯೋಗ ಮತ್ತು ಸ್ವಾವಲಂಬನೆ ಕಲ್ಪಿಸುವ ಸದುದ್ದೇಶದಿಂದ ಕೆಳಕಂಡ ವಿಷಯಗಳಲ್ಲಿ ವೃತ್ತಿಪರ ತರಬೇತಿಗಳನ್ನು ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗುವುದು.

- ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಸಸ್ಯಾಭಿವೃದ್ಧಿ ವಿಧಾನಗಳು
- ಅಣಬೆ ಕೃಷಿ
- ಹಣ್ಣು ಮತ್ತು ತರಕಾರಿಗಳ ಹಾಗೂ ತೋಟಗಾರಿಕಾ ಉತ್ಪನ್ನಗಳ ಮೌಲ್ಯವರ್ಧನೆ
- ಸಾವಯವ ಕೃಷಿ
- ಜೇನು ಕೃಷಿ
- ಕೃಷಿ ಯಂತ್ರೋಪಕರಣೆಗಳ ಬಳಕೆ ಮತ್ತು ಅವುಗಳ ನಿರ್ವಹಣೆ

- ಪಶು ಸಂಗೋಪನೆ
- ಅಲಂಕಾರಿಕ ಮೀನು ಸಾಕಾಣಿಕೆ ಇತ್ಯಾದಿ

**ವಿಸ್ತರಣಾ ಚಟುವಟಿಕೆಗಳು**

**ಮಾಧ್ಯಮ:**

ಬಾನುಲಿ, ದೂರದರ್ಶನ ಮತ್ತು ಸಂದೇಶಗಳ ಮೂಲಕ ವಿವಿಧ ಬೆಳೆ ಉತ್ಪಾದನೆ, ಮಣ್ಣು ಫಲವತ್ತತೆ ಮತ್ತು ಸಂರಕ್ಷಣೆ, ಕೃಷಿ ಯಾಂತ್ರೀಕರಣ, ತೋಟಗಾರಿಕೆ, ಪಶುಸಂಗೋಪನೆ, ಮೌಲ್ಯವರ್ಧನೆಯ ಮಾಹಿತಿಯನ್ನು ವೈವಿಧ್ಯಮಯ ಮಾಧ್ಯಮಗಳ ಮೂಲಕ ರೈತರಿಗೆ ಮಾಹಿತಿಯನ್ನು ನೀಡಲಾಗುತ್ತಿದೆ.

**ಲೇಖನಗಳು:**

ಕೃಷಿ ಮತ್ತು ಕೃಷಿಗೆ ಸಂಬಂಧಿತ ವೈಜ್ಞಾನಿಕ ಲೇಖನಗಳನ್ನು ಮುದ್ರಿಸುವ/ಹೊರತರುವ ಮೂಲಕ ಕೇಂದ್ರದ ಕಾರ್ಯಚಟುವಟಿಕೆಗಳನ್ನು ಕೃಷಿ ತ್ರೈ ಮಾಸಿಕ ಪತ್ರಿಕೆ, ಫೋಲ್ಡರ್ಸ್, ಹಸ್ತಪತ್ರಿಕೆ/ಪ್ರಕಟನಾ ಪತ್ರ, ಲೇಖನಗಳನ್ನು ಮುದ್ರಿಸುವ ಮೂಲಕ ಕೃಷಿ ವಿಜ್ಞಾನ ಕೇಂದ್ರದಿಂದ ಹೊಸ ತಾಂತ್ರಿಕತೆಗಳನ್ನು ರೈತರಿಗೆ ನೀಡಲು ಶ್ರಮಿಸುತ್ತಿದೆ.

**ವಿಸ್ತರಣಾ ಚಟುವಟಿಕೆಗಳು**

ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಸಮಸ್ಯಾತ್ಮಕ ಕ್ಷೇತ್ರಗಳಿಗೆ ಭೇಟಿ ಕೊಡುವುದು, ವೈಜ್ಞಾನಿಕ ಸಲಹಾ ಸೂಚನೆ ಕೊಡುವುದು, ಕೃಷಿ ಗೋಷ್ಠಿಗಳನ್ನು ಕೈಗೊಳ್ಳುವುದು, ವಿಚಾರ ಸಂಕಿರಣ ಹಾಗೂ ಕಾರ್ಯಗಾರಗಳನ್ನು ಹಮ್ಮಿಕೊಳ್ಳುವುದು, ಕೃಷಿ ಮೇಳಗಳನ್ನು ಹಮ್ಮಿಕೊಳ್ಳುವುದು, ಕೃಷಿ ವಸ್ತು ಪ್ರದರ್ಶನಗಳನ್ನು ಹಮ್ಮಿಕೊಳ್ಳುವುದು, ಪದ್ಧತಿ ಪ್ರಾತ್ಯಕ್ಷಿಕೆಗಳು ಹಾಗೂ ಕ್ಷೇತ್ರ ಭೇಟಿಗಳನ್ನು ಹಮ್ಮಿಕೊಳ್ಳುವುದು.

ವಿಶೇಷ ದಿನಗಳಾದ ವಿಶ್ವ ಆಹಾರ ದಿನ, ಕೃಷಿ ನಿರತ ರೈತ ಮಹಿಳೆಯರ ದಿನ, ರೈತ ದಿನಾಚರಣೆ, ಕ್ಷೇತ್ರೋತ್ಸವಗಳ ಆಚರಣೆ, ಪಶು ಚಿಕಿತ್ಸಾ ಶಿಬಿರ, ಮಣ್ಣು ಪರೀಕ್ಷಾ ಆಂದೋಲನ, ತಂತ್ರಜ್ಞಾನ ಸಪ್ತಾಹ, ಪಾರ್ಥೇನಿಯಂ ಅರಿವು ದಿನಗಳ ಆಚರಣೆಯನ್ನು ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಆಚರಿಸಲಾಗುತ್ತದೆ.

**ಕೃಷಿ ವಿಜ್ಞಾನ ಕೇಂದ್ರದಲ್ಲಿ ದೊರೆಯುವ ಇತರೆ ಸೌಲಭ್ಯಗಳು**

**ತರಬೇತಿ ಸಭಾಂಗಣ:–**

ಕೃಷಿ ವಿಜ್ಞಾನ ಕೇಂದ್ರವು 40 ಜನರ ಸಾಮರ್ಥ್ಯದ ಸುಸಜ್ಜಿತವಾದ ತರಬೇತಿ ಸಭಾಂಗಣವನ್ನು ಹೊಂದಿದ್ದು, ರೈತರು ಮತ್ತು ರೈತ ಮಹಿಳೆಯರಿಗೆ ನೂತನ ತಾಂತ್ರಿಕತೆಯ ಬಗ್ಗೆ ಹೆಚ್ಚಿನ ಜ್ಞಾನ ಹಾಗೂ ಕೌಶಲ್ಯಗಳನ್ನು ಕಲಿಸಲು ಅವಶ್ಯಕತೆಗೆ ತಕ್ಕಂತೆ ವಿವಿಧ ಅವಧಿಯ ಒಳಾಂಗಣ ತರಬೇತಿಯನ್ನು ಹಾಗೂ ಪ್ರಸ್ತುತ ಎದುರಿಸುತ್ತಿರುವ ಕ್ಷೇತ್ರ ಸಮಸ್ಯೆಗೆ ಪರಿಹಾರ ಸೂಚಿಸಲು ಗ್ರಾಮ ಮಟ್ಟದಲ್ಲಿಯೇ ಒಂದು ದಿನದ ಹೊರಾಂಗಣ ತರಬೇತಿಗಳನ್ನು ಹಮ್ಮಿಕೊಳ್ಳಲಾಗುವುದು. ಈ ಪ್ರಮುಖ ಚಟುವಟಿಕೆಗಳ ಜೊತೆಗೆ ಕೃಷಿ ಪೂರಕವಾಗಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಇರುವ ಇತರೆ ಸೌಲಭ್ಯಗಳು ಹೀಗಿವೆ.

**ವಸತಿಗೃಹ ಸೌಲಭ್ಯ:** 30 ಜನ ತರಬೇತಿ ಅಭ್ಯರ್ಥಿಗಳು ಉಳಿದುಕೊಳ್ಳುವ ವ್ಯವಸ್ಥೆಯು ಕೃಷಿ ವಿಜ್ಞಾನ ಕೇಂದ್ರದ ವಸತಿ ಗೃಹದಲ್ಲಿದೆ.

**ಮಣ್ಣು ಪರೀಕ್ಷಾ ಪ್ರಯೋಗಾಲಯ:**

ಕೃಷಿ ವಿಜ್ಞಾನ ಕೇಂದ್ರದಲ್ಲಿ ಸುಸಜ್ಜಿತವಾದ ಮಣ್ಣು ಮತ್ತು ನೀರು ವಿಶ್ಲೇಷಣಾ ಪ್ರಯೋಗಲಯದ ಸೌಲಭ್ಯವಿದ್ದು ರೈತರಿಗೆ ರಿಯಾಯಿತಿ ದರದಲ್ಲಿ ಪರೀಕ್ಷೆ ಮಾಡಿಕೊಡಲಾಗುವುದು. ಪರೀಕ್ಷಾ ವರದಿಯ ಆಧಾರದ ಮೇಲೆ ಬೆಳೆಗಳಿಗೆ ಹಾಕಬೇಕಾದ ಗೊಬ್ಬರಗಳ ಪ್ರಮಾಣವನ್ನು ಶಿಫಾರಸ್ಸು ಮಾಡಲಾಗುವುದು. ಜೊತೆಗೆ ಸಮಸ್ಯಾತ್ಮಕ ಮಣ್ಣುಗಳಿದ್ದಲ್ಲಿ ಸೂಕ್ತ ಪರಿಹಾರ ಮತ್ತು ಮಾರ್ಗದರ್ಶನಗಳನ್ನು ತಿಳಿಸಿಕೊಡಲಾಗುವುದು.

| **ಮಾದರಿಯ ವಿಧ** | | **ಶುಲ್ಕ (ರೂ.)** |
|---|---|---|
| ಮಣ್ಣು | – | 30/– ಪ್ರತಿ ಮಾದರಿಗೆ |
| ನೀರು | – | 60/– ಪ್ರತಿ ಮಾದರಿಗೆ |
| ಸುಣ್ಣ | – | 60/– ಪ್ರತಿ ಮಾದರಿಗೆ |

**ಪ್ರಾತ್ಯಕ್ಷಿಕಾ ಘಟಕಗಳು**

ಕೃಷಿ ವಿಜ್ಞಾನ ಕೇಂದ್ರದಲ್ಲಿ ಉತ್ತಮ ಪ್ರಾತ್ಯಕ್ಷಿಕ ಘಟಕಗಳು ಈ ಕೆಳಗಿನಂತಿವೆ:

1. ನರ್ಸರಿ ಘಟಕ
2. ವಿಭಿನ್ನ ಕಾಫಿ ತಳಿಗಳ ಘಟಕ
3. ಏಲಕ್ಕಿ ತಳಿ ಘಟಕ
4. ಅಝೋಲಾ ಘಟಕ
5. ಮೇವಿನ ಹುಲ್ಲು ಘಟಕ
6. ಅಲಂಕಾರಿಕ ಮೀನು ಘಟಕ

ಕೃಷಿ ವಿಜ್ಞಾನ ಕೇಂದ್ರದಲ್ಲಿ ಮಾರಾಟಕ್ಕೆ ದೊರೆಯುವ ಸಸಿಗಳು

1. ಕಾಫಿ
2. ಕಾಳು ಮೆಣಸು
3. ಏಲಕ್ಕಿ
4. ಕರಿಬೇವು

**2013–14 ಸಾಲಿನಲ್ಲಿ ಕೈಗೊಂಡ ತಂತ್ರಜ್ಞಾನ ಪರಿಶೀಲನೆ**

| ಕ್ರ.ಸಂ. | ತಂತ್ರಜ್ಞಾನ ಪರಿಶೀಲನೆ |
|---|---|
| 1 | ಈರುಳ್ಳಿ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ |
| 2 | ಟೊಮ್ಯಾಟೊ ಬೆಳೆಯಲ್ಲಿ ಕೊನೆಯ ಅಂಗಮಾರಿ ರೋಗದ ನಿರ್ವಹಣೆ |
| 3 | ಅಡಿಕೆಯಲ್ಲಿ ಅಂತರ ಬೆಳೆಯಾಗಿ ತಿಂಗಳ ಹುರುಳಿ (ಬೀನ್ಸ್) |
| 4 | ಒಣ ಮತ್ತು ಕೆಳ ಸಮಶೀತೋಷ್ಣವಲಯಗಳಲ್ಲಿ ಕೆಂಗೂರಿ ಮತ್ತು ಭಾರತ ಮೇರಿನೊ ಕುರಿಗಳ ಹೊಂದಿಕೊಳ್ಳುವಿಕೆ |

**<u>2013–14 ಸಾಲಿನಲ್ಲಿ ಕೈಗೊಂಡ ಮುಂಚೂಣಿ ಪ್ರಾತ್ಯಕ್ಷಿತೆಗಳು</u>**

| ಕ್ರ.ಸಂ. | ಮುಂಚೂಣಿ ಪ್ರಾತ್ಯಕ್ಷಿತೆಗಳು |
|---|---|
| 1 | ಕಡಲೆ ಬೆಳೆಯ ಸಮಗ್ರ ನಿರ್ವಹಣೆ |
| 2 | ಭತ್ತದ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ |
| 3 | ರಾಗಿ ಬೆಳೆಯ ಸಮಗ್ರ ನಿರ್ವಹಣೆ (ಎಂ.ಎಲ್–365) |
| 4 | ಈರುಳ್ಳಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ |
| 5 | ಹಸಿ ಮೆಣಸಿನಕಾಯ ಬೆಳೆಯಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ (ವೆಜಿಟೆಬಲ್ ಸ್ಪೆಷಲ್) |
| 6 | ಚೈನಾ ಆಸ್ಟರ್ (ಅರ್ಕಾ ಕಾಮಿನಿ) ತಳಿಯ ಪರಿಚಯ |
| 7 | ಬಾಳೆ ಬೆಳೆಯಲ್ಲಿ ಲಘುಪೋಷಕಾಂಶಗಳ (ಬಾಳೆ ಸ್ಪೆಷಲ್) ನಿರ್ವಹಣೆ |
| 8 | ಮಾವು ಸಮಗ್ರ ಬೆಳೆ ನಿರ್ವಹಣೆ |
| 9 | ಕಾಳುಮೆಣಸಿನಲ್ಲಿ ತೀವ್ರ ಸೊರಗು ರೋಗದ ನಿರ್ವಹಣೆಗೆ ಜೈವಿಕ ಶಿಲೀಂದ್ರ ಮತ್ತು ಬೋರ್ಡೋ ದ್ರಾವಣ ಬಳಕೆ |
| 10 | ಕಾಫಿ ಮಣ್ಣಿನಲ್ಲಿ ರಂಜಕದ ನಿರ್ವಹಣೆಗೆ ಸಿಟ್ರಿಕ್ ಆಸಿಡ್ ಬಳಕೆ |
| 11 | ಆಡುಗಳಲ್ಲಿ ಪರಾವಲಂಬಿ ಜೀವಿಗಳ ಹತೋಟಿಗೆ ಕ್ಲೋಸೆನ್‌ಟಾಲ್ ಬಳಕೆ |

**ಏರ್ಪಡಿಸಿದ ತರಬೇತಿ ಕಾರ್ಯಕ್ರಮದ ವಿವರ**

**ಅ) ಒಳ ಆವರಣ**

| ಕ್ರ.ಸಂ. | ವಿವರ |
|---|---|
| 1 | ಕಾಳು ಮೆಣಸಿನಲ್ಲಿ ಸೊರಗು ರೋಗ ನಿರ್ವಹಣೆಗೆ ಟ್ರೈಕೊಡರ್ಮ ಬಳಕೆ |
| 2 | ಹಸಿರು ಮನೆಯಲ್ಲಿ ದೊಣ್ಣೆ ಮೆಣಸಿನಕಾಯಿ ಮತ್ತು ಟೊಮ್ಯಾಟೊ ಬೆಳೆಯ ಬೇಸಾಯ |
| 3 | ಕಾಫಿ ಬೆಳೆಯ ಸಮಗ್ರ ನಿರ್ವಹಣೆ |
| 4 | ತೋಟಗಾರಿಕೆ ಬೆಳೆಗಳಲ್ಲಿ ಮೌಲ್ಯವರ್ಧನೆ ಮತ್ತು ಅಣಬೆ ಬೇಸಾಯ |
| 5 | ಸಮಗ್ರ ಬೇಸಾಯದಲ್ಲಿ ಸಾವಯವ ಕೃಷಿ ಮತ್ತು ಸ್ವ–ಸಹಾಯ ಸಂಘಗಳ ನಿರ್ಮಾಣಗಳ ಬಗ್ಗೆ ತರಬೇತಿ |
| 6 | ಸಮಗ್ರ ಕೃಷಿ ಪದ್ಧತಿ |
| 7 | ಬೇಸಾಯ ಪದ್ಧತಿಗಳು ಮತ್ತು ಜೀವಂತ ಬೇಲಿ |

**ಆ) ಹೊರ ಆವರಣ**

| ಕ್ರ.ಸಂ. | ವಿವರ |
|---|---|
| 1 | ಭತ್ತದ ಬೆಳೆಯಲ್ಲಿ ಶಿಲೀಂದ್ರನಾಶಕಗಳ ಬೀಜೋಪಚಾರದ ಪ್ರಾಮುಖ್ಯತೆ ಮತ್ತು ಉಪಯೋಗ |
| 2 | ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ |
| 3 | ಭತ್ತದಲ್ಲಿ ಆಧುನಿಕತೆ |
| 4 | ಕಡಲೆ ಬೆಳೆಯ ಸಮಗ್ರ ನಿರ್ವಹಣೆ |
| 5 | ಕಡಲೆ ಬೆಳೆಯ ಸಮಗ್ರ ನಿರ್ವಹಣೆ |
| 6 | ಅಣಬೆ ಬೇಸಾಯ ಮತ್ತು ಆಧುನಿಕತೆ |
| 7 | ಗ್ರಾಮೀಣ ಪ್ರದೇಶದಲ್ಲಿ ಸ್ವ-ಉದ್ಯೋಗ |
| 8 | ಗ್ರಾಮೀಣ ಪ್ರದೇಶದಲ್ಲಿ ಸ್ವ-ಉದ್ಯೋಗ |
| 9 | ಗ್ರಾಮೀಣ ಪ್ರದೇಶದಲ್ಲಿ ಸ್ವ-ಉದ್ಯೋಗ ಮತ್ತು ತರಕಾರಿ ಬೇಸಾಯ |
| 10 | ಮೆಣಸಿನ ಕಾಯಿ ಬೆಳೆಯಲ್ಲಿ ಲಘುಪೋಷಕಾಂಶಕಗಳ ಬಳಕೆ |
| 11 | ಕಾಫಿ, ಕಾಳು ಮೆಣಸು ಮತ್ತು ಅಡಿಕೆ ಬೆಳೆಗಳ ಸಮಗ್ರ ನಿರ್ವಹಣೆ |
| 12 | ಕಾಫಿ, ಕಾಳು ಮೆಣಸು ಮತ್ತು ಅಡಿಕೆ ಬೆಳೆಗಳ ಸಮಗ್ರ ನಿರ್ವಹಣೆ |
| 13 | ಟೊಮ್ಯಾಟೊ ಬೆಳೆಯ ಸಮಗ್ರ ನಿರ್ವಹಣೆ |
| 14 | ತರಕಾರಿ ಬೆಳೆಗಳಲ್ಲಿ ಬೇಸಾಯ ಕ್ರಮಗಳು |
| 15 | ತರಕಾರಿ ಬೆಳೆಗಳಲ್ಲಿ ಆಧುನಿಕತೆ |
| 16 | ತಾರಾಸಿ ಕೈತೋಟ |
| 17 | ಕಾಳು ಮೆಣಸು ಮತ್ತು ಕಾಫಿ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ |
| 18 | ತೋಟಗಾರಿಕಾ ಬೆಳೆಗಳಲ್ಲಿ ಸಮಗ್ರ ಬೇಸಾಯ ಕೀಟ ಮತ್ತು ರೋಗ ನಿರ್ವಹಣೆ |
| 19 | ವೈಜ್ಞಾನಿಕ ಬೋರ್ಡೋ ದ್ರಾವಣ ತಯಾರಿಸುವಿಕೆ ಮತ್ತು ಉಪಯೋಗ |
| 20 | ಭತ್ತದಲ್ಲಿ ಕೀಟ ಮತ್ತು ರೋಗಗಳ ನಿರ್ವಹಣೆ |
| 21 | ಮಾವು ಮತ್ತು ಬಾಳೆ ಬೆಳೆಯಲ್ಲಿ ಸಮಗ್ರ ಬೇಸಾಯ ಕ್ರಮಗಳು |
| 22 | ಮಾವು ಬೆಳೆಯಲ್ಲಿ ಲಘುಪೋಷಕಾಂಶಗಳ ಬಳಕೆ |
| 23 | ಮಾವು ಬೆಳೆಯಲ್ಲಿ ಲಘುಪೋಷಕಾಂಶಗಳ ಬಳಕೆ |
| 24 | ಭತ್ತದಲ್ಲಿ ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ |
| 25 | ಕಡಲೆ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ |
| 26 | ಬಾಳೆಯಲ್ಲಿ ಸಮಗ್ರ ಬೇಸಾಯ ಕೀಟ ಮತ್ತು ರೋಗಗಳ ನಿರ್ವಹಣೆ |
| 27 | ಸಮಗ್ರ ಸಸ್ಯ ಸಂರಕ್ಷಣೆ |
| 28 | ಪರಿಸರ ಸ್ನೇಹಿ ಕೃಷಿ-ಸಮಗ್ರ ಕೀಟ ಮತ್ತು ರೋಗ ಗಳ ನಿರ್ವಹಣೆ |
| 29 | ತೆಂಗಿನ ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ |
| 30 | ಮಾವು ಬೆಳೆಯಲ್ಲಿ ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ |
| 31 | ಕಾಫಿ ಮತ್ತು ಕಾಳು ಮೆಣಸಿನ ಬೆಳೆಯ ಸಮಗ್ರ ಬೇಸಾಯ ಪದ್ಧತಿಗಳು |
| 32 | ಮಲೆನಾಡಿನಲ್ಲಿ ಹೈನುಗಾರಿಕೆ, ಕುರಿ ಮತ್ತು ಹಂದಿ ಸಾಕಾಣಿಕೆ ಹಾಗೂ ಅವುಗಳ ವೈಜ್ಞಾನಿಕತೆ |
| 33 | ಕುರಿ ಮತ್ತು ಆಡು ಸಾಕಾಣಿಕೆಯಲ್ಲಿ ಆಧುನಿಕತೆ |
| 34 | ಹಿತ್ತಲ ಮನೆಯಲ್ಲಿ ಕೋಳಿ ಸಾಕಾಣಿಕೆ |

**ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿ ಕಾರ್ಯಕ್ರಮಗಳು**

| ಕ್ರ.ಸಂ. | ವಿವರ |
|---|---|
| 1 | ಮುಂಗಾರಿನ ಬೆಳೆಗಳಲ್ಲಿ ಸಮಗ್ರ ಬೇಸಾಯ ಪದ್ಧತಿಗಳು |
| 2 | ಕೃಷಿ ಇಲಾಖೆಯ ವಿಸ್ತರಣಾ ಕಾರ್ಯಕರ್ತರುಗಳಿಗೆ ಮುಂಗಾರು ಹಂಗಾಮಿನ ಮುಖ್ಯ ಕೃಷಿ ಬೆಳೆಗಳ ಸಮಗ್ರ ಬೆಳೆ |

| | |
|---|---|
| | ನಿರ್ವಹಣೆ |
| 3 | ಸಮತೋಲನ ಆಹಾರ, ಗರ್ಭಿಣಿ ಮತ್ತು ಬಾಣಂತಿಯರ ಆರೈಕೆಯಲ್ಲಿ ಆಹಾರ ನಿರ್ವಹಣೆ ಮತ್ತು ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಮೌಲ್ಯವರ್ಧನೆ |
| 4 | ಭೂಚೇತನ ಕಾರ್ಯಕರ್ತರಿಗೆ ಮುಂಗಾರು ಹಂಗಾಮಿನ ಮುಖ್ಯ ಬೆಳೆಗಳ ಸಮಗ್ರ ಬೇಸಾಯ ಕ್ರಮಗಳು |
| 5 | ಹುಳಿ ಮತ್ತು ಕ್ಷಾರ ಮಣ್ಣಿನಲ್ಲಿ ಮೀನು ಕೃಷಿ |
| 6 | ಸುರಕ್ಷಿತ ಕೀಟನಾಶಕಗಳ ಬಳಕೆ |
| 7 | ಮನೆ ಅಂಗಳದಲ್ಲಿ ಸುಂದರ ಕೈತೋಟ |
| 8 | ಆರೋಗ್ಯವಾದ ತರಕಾರಿಗೆ–ಕೈತೋಟ |
| 9 | ಅಲಂಕಾರಿಕ ಮೀನು ಕೃಷಿ, ಕಾಫಿ ಮತ್ತು ಕಾಳು ಮೆಣಸಿನಲ್ಲಿ ಕೀಟ ಮತ್ತು ರೋಗ ನಿರ್ವಹಣೆ ಹಾಗೂ ಕೈತೋಟ |

**ಯುವಕ ಯುವತಿಯರಿಗೆ ತರಬೇತಿ ಕಾರ್ಯಕ್ರಮ**

| ಕ್ರ.ಸಂ. | ವಿವರ |
|---|---|
| 1 | ತೋಟಗಾರಿಕಾ ಬೆಳೆಗಳಲ್ಲಿ ಸಮಗ್ರ ಬೇಸಾಯ ಪದ್ಧತಿಗಳು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸ್ವ–ಉದ್ಯೋಗದ ತರಬೇತಿ ಕುರಿತು |

**ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳ ವಿವರ**

| ಕ್ರ.ಸಂ. | ವಿವರ |
|---|---|
| 1 | ತೆಂಗಿನ ಮರ ಹತ್ತುವ ಸಾಧನ ಪ್ರಾತ್ಯಕ್ಷಿಕೆ ಹಾಗೂ ಸಸ್ಯ ಸಂರಕ್ಷಣೆ ತರಬೇತಿ ಕಾರ್ಯಕ್ರಮ |
| 2 | ತೆಂಗಿನ ಮರ ಹತ್ತುವ ಕೌಶಲ್ಯ ತರಬೇತಿ ಕಾರ್ಯಕ್ರಮ |
| 3 | ತೆಂಗಿನ ಮರ ಹತ್ತುವ ಕೌಶಲ್ಯ ತರಬೇತಿ ಕಾರ್ಯಕ್ರಮ |
| 4 | ಮಹಿಳಾ ಕಾಫಿ ಬೆಳೆಗಾರರಿಗೆ ವೃತ್ತಿಪರ ತರಬೇತಿ |
| 5 | ಮಹಿಳಾ ಕಾಫಿ ಬೆಳೆಗಾರರಿಗೆ ವೃತ್ತಿಪರ ತರಬೇತಿ |
| 6 | ಮಹಿಳಾ ಕಾಫಿ ಬೆಳೆಗಾರರಿಗೆ ವೃತ್ತಿಪರ ತರಬೇತಿ |
| 7 | ತೆಂಗಿನ ಮರ ಹತ್ತುವ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ |
| 8 | ಮಹಿಳಾ ಕಾಫಿ ಬೆಳಗಾರರಿಗೆ ವೃತ್ತಿಪರ ತರಬೇತಿ |
| 9 | ಮಹಿಳಾ ಕಾಫಿ ಬೆಳಗಾರರಿಗೆ ವೃತ್ತಿಪರ ತರಬೇತಿ |

**ರೈತ ಕ್ಷೇತ್ರ ಪಾಠಶಾಲೆ**

**ಶೀರ್ಷಿಕೆ:** ಭತ್ತದ ಬೆಳೆಯ ಸಮಗ್ರ ನಿರ್ವಹಣೆ

**ಕ್ಷೇತ್ರ:** 2 ಎಕರೆ

**ಸ್ಥಳ:** ಜೇನುಬೈಲು, ಮೂಡಿಗೆರೆ ತಾಲ್ಲೂಕು

**ರೈತರ ಸಂಖ್ಯೆ:** (25 ಜನರ ಗುಂಪು)

| ಕ್ರಮ ಸಂಖ್ಯೆ | ತರಬೇತಿ |
|---|---|
| 1 | ಬೀಜೋಪಚಾರ |
| 2 | ಕ್ಷೇತ್ರ ಭೇಟಿ |
| 3 | ಸಸಿ ಮಡಿ ತಯಾರಿಸುವಲ್ಲಿ ಕೌಶಲ್ಯತೆ |
| 4 | ಭತ್ತದಲ್ಲಿ ಯಂತ್ರಗಳ ಬಳಕೆಯಿಂದ ಸಸಿ ಮಡಿ ನೆಡಿಸುವಿಕೆ |
| 5 | ಭತ್ತದಲ್ಲಿ ಸಮಗ್ರ ಕಳೆ ನಿರ್ವಹಣೆಯ ಪ್ರಾತ್ಯಕ್ಷಿಕೆ |

| | |
|---|---|
| 6 | ಭತ್ತದ ಬೆಳೆಯಲ್ಲಿ ರಸಗೊಬ್ಬರಗಳ ನಿರ್ವಹಣೆ |
| 7 | ಭತ್ತದಲ್ಲಿ ರಸಗೊಬ್ಬರಗಳ ನಿರ್ವಹಣೆಯ ಪ್ರಾತ್ಯಕ್ಷಿಕೆ |
| 8 | ಭತ್ತದಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ |
| 9 | ಕೊಯ್ಲೋತ್ತರ ರೋಗ ಮತ್ತು ಸಪ್ತನಿಗಳ ಹತೋಟಿ |
| 10 | ಬೆಳೆ ಕ್ಷೇತ್ರೋತ್ಸವ |

**ಕ್ಷೇತ್ರೋತ್ಸವ**

| ಕ್ರ.ಸಂ | ಬೆಳೆ |
|---|---|
| 1 | ಈರುಳ್ಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ |
| 2 | ಮೆಣಸಿನ ಕಾಯಿ ಬೆಳೆಯಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ |
| 3 | ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ |
| 4 | ಭತ್ತದಲ್ಲಿ ಸಮಗಸ್ರ ಕೀಟ ಮತ್ತು ರೋಗ ನಿರ್ವಹಣೆ |
| 5 | ಕಡಲೆ ಬೆಳೆಯ ಸಮಗ್ರ ನಿರ್ವಹಣೆ |
| 6 | ಅಡಿಕೆಯಲ್ಲಿ ಅಂತರ ಬೆಳೆಯಾಗಿ ತಿಂಗಳ ಹುರುಳಿ (ಬೀನ್ಸ್) |
| 7 | ಟೊಮ್ಯಾಟೊ ಬೆಳೆಯಲ್ಲಿ ಕೊನೆಯ ಅಂಗಮಾರಿ ರೋಗದ ನಿರ್ವಹಣೆ |
| 8 | ಬಾಳೆ ಬೆಳೆಯಲ್ಲಿ ಲಘು ಪೋಷಕಾಂಶಕಗಳ ನಿರ್ವಹಣೆ |

**ಕಾರ್ಯಗಾರ/ವಿಚಾರ ಸಂಕಿರಣ**

| ಕ್ರ.ಸಂ | ವಿಷಯ |
|---|---|
| 1 | ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ, ಕೀಟ ಮತ್ತು ರೋಗಗಳ ನಿರ್ವಹಣೆ |
| 2 | ಕೃಷಿ ವಿಚಾರ ಸಂಕಿರಣ |
| 3 | ಪಶು ಆರೋಗ್ಯ ಚಿಕಿತ್ಸಾ ಶಿಬಿರ |

## 2014–15 ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳು

### ತಂತ್ರಜ್ಞಾನ ಪರಿಶೀಲನೆ

| ಕ್ರ.ಸಂ. | ತಂತ್ರಜ್ಞಾನ ಮರುಪರಿಶೀಲನೆ |
|---|---|
| 1 | ಕರಿ ಮೆಣಸಿನಲ್ಲಿ ಕಾಳು ಉದುರುವಿಕೆ ಮತ್ತು ಅಧಿಕ ಇಳುವರಿಯ (ಕಾಳು ಕಟ್ಟುವಿಕೆ) ಪ್ರಾತ್ಯಕ್ಷಿಕೆ |
| 2 | ಟೊಮ್ಯಾಟೊ ಬೆಳೆಯಲ್ಲಿ ಕೊನೆಯ ಅಂಗಮಾರಿ ರೋಗದ ಸಮಗ್ರ ನಿರ್ವಹಣೆ |
| 3 | ಈರುಳ್ಳಿ ಬೆಳೆಯಲ್ಲಿ ಥ್ರಿಪ್ಸ್ ನುಸಿ ಹಾಗೂ ನೇರಳೆ ಮಚ್ಚೆ ರೋಗದ ನಿರ್ವಹಣೆ |
| 4 | ಅಧಿಕ ಇಳುವರಿ ಕೊಡುವ ಶುಂಠಿ ತಳಿಯ ಮರು ಪರಿಶಿಲನೆ |

### ಮುಂಚೂಣಿ ಕ್ಷೇತ್ರ ಪ್ರಾತ್ಯಕ್ಷಿಕೆಗಳು

| ಕ್ರ.ಸಂ | ವಿವರ |
|---|---|
| 1 | ಭತ್ರದ ಬೆಳೆಯಲ್ಲಿ ಸಮಗ್ರ ಕಳೆ ನಿರ್ವಹಣೆ |
| 2 | ಭತ್ರದ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ (ತುಂಗಾ) |
| 3 | ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ |
| 4 | ಕಾಫಿ ಬೆಳೆಯಲ್ಲಿ ರಸಗೊಬ್ಬರ ಸಮರ್ಪಕ ಬಳಕೆಗೆ ಲಘು ಪೋಷಕಾಂಶಗಳ ಸಿಂಪರಣೆ |
| 5 | ಭತ್ತದ ಉತ್ಪಾದಕತೆಯನ್ನು ಹೆಚ್ಚಿಸಲು ಹುಳಿ ಮಣ್ಣಿನ ನಿರ್ವಹಣೆ |
| 6 | ಕಾಳು ಮೆಣಸಿನಲ್ಲಿ ಅಧಿಕ ಇಳುವರಿಗೆ ಲಘು ಪೋಷಕಾಂಶಗಳ ಬಳಕೆ/ಸಿಂಪರಣೆ |
| 7 | ಈರುಳ್ಳಿ ಬೆಳೆಯಲ್ಲಿ ಆಧುನಿಕ ಬೇಸಾಯ ಕ್ರಮಗಳು |
| 8 | ಮೆಣಸಿನ/ಕಾಯಿ ಬೆಳೆಯ ಸಮಗ್ರ ನಿರ್ವಹಣೆ |
| 9 | ಕಲ್ಲಂಗಡಿ ಬೆಳೆಯಲ್ಲಿ ಸಮಗ್ರ ಬೇಸಾಯ ಕ್ರಮಗಳು |
| 10 | ಕಡಲೆ ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ |
| 11 | ಕಾಳು ಮೆಣಸಿನಲ್ಲಿ ಬುಡ ಕೊಳೆ ರೋಗದ ಸಮಗ್ರ ನಿರ್ವಹಣೆ |
| 12 | ಕಾಫಿಯಲ್ಲಿ ಬಿಳಿ ಕಾಂಡ ಕೊರಕದ ನಿರ್ವಹಣೆಗೆ ಹೀಲರ್ ಮತ್ತು ಸೀಲರ್‌ನ ಪರಿಚಯ |
| 13 | ಆಡುಗಳಲ್ಲಿ/ಮೇಕೆಗಳಲ್ಲಿ ಎಂಡೆಕ್ಟೋಪ್ಯಾರಸಿಟಿಸೈಡನ್ ಪರಿಣಾಮಕಾರಿ ಪರಿಚಯ |
| 14 | ಉತ್ತಮ ಗುಣಮಟ್ಟದ ಮತ್ತು ಹೆಚ್ಚಿನ ಆದಾಯಕ್ಕಾಗಿ ಕರಿಮೆಣಸಿನ ಸಂಸ್ಕರಣೆ |
| 15 | ಸಮಗ್ರ ಬೇಸಾಯ ಪದ್ಧತಿ |

### ರೈತ ಕ್ಷೇತ್ರ ಪಾಠಶಾಲೆ

| ಕ್ರ.ಸಂ. | ವಿಷಯ |
|---|---|
| 1 | ಭತ್ತದಲ್ಲಿ ಸಮಗ್ರ ಕೀಟ ಹಾಗೂ ರೋಗದ ನಿರ್ವಹಣೆ |